# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಂಖ್ಯೆ:- ಮುಪ್ರವ್ಯ(ಕಾ)/ಉಪ್ರವ್ಯ-3/ಸಪ್ರವ್ಯ-1/ಬಿಸಿ-05/ಕ-5.12/25-20/ 845-31
ಲಗತ್ತು:-

2ನೇ ಬ್ಲಾಕ್, 3ನೇ ಮಹಡಿ,
ನಿಗಮ ಕಾರ್ಯಾಲಯ,
ಬೆ.ವಿ.ಕಂ., ಕೆ.ಆರ್.ವೃತ್ತ,
ಬೆಂಗಳೂರು
ದಿನಾಂಕ: - 2 AUG 2025

855

| | |
|---|---|
| ಸ್ವೀಕೃತಿ ಸಂಖ್ಯೆ: | 855 |
| ದಿನಾಂಕ: | 07 AUG 2025 |
| ಲೆ.ನಿ. | |
| ಅ.ಇಂ(ವಿ) | |
| ಕಾ.ಇಂ. (ವಾ.ಪ) | |
| ಕಾ.ಇಂ. (ಕಾ) | |
| ಅ.ಕ | |

ಮುಖ್ಯ ಇಂಜಿನಿಯರ್(ವಿ),
ವಾ, ಕಾ ಮತ್ತು ಪಾ, ಬೆವಿಕಂ,
ಬೆಂಗಳೂರು ಮಹಾನಗರ ಕ್ಷೇತ್ರ(ದಕ್ಷಿಣ/ಉತ್ತರ),
ಬೆಂಗಳೂರು ಗ್ರಾಮಾಂತರ/ಚಿತ್ರದುರ್ಗ ವಲಯ,
ಬೆಂಗಳೂರು/ಚಿತ್ರದುರ್ಗ.

ಮಾನ್ಯರೆ,

ವಿಷಯ:- ಗಣೇಶೋತ್ಸವ ಆಚರಣೆಯ ಸಂಬಂಧ ಬೆವಿಕಂ ಅನುಮತಿಯಿಂದ ಸುರಕ್ಷಿತ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಸಂಬಂಧಿಸಿದಂತೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ: 27.08.2025ರಿಂದ ಆರಂಭವಾಗುವ ಗಣೇಶೋತ್ಸವ ಪ್ರತಿಷ್ಠಾಪನೆ, ವಿಸರ್ಜನೆ ಮತ್ತು ಇತರೆ ಉತ್ಸವಗಳ ಆಚರಣೆಯ ಸಂಧರ್ಭದಲ್ಲಿ ಬೆವಿಕಂನಿಂದ ತಾತ್ಕಾಲಿಕ ವಿದ್ಯುತ್ ಸಂಪರ್ಕ ಕಲ್ಪಿಸಲು ನಿರ್ದೇಶಿಸಲಾಗಿದೆ. ಬೆವಿಕಂನ ಉಪವಿಭಾಗಾಧಿಕಾರಿಗಳು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಯಾವುದೇ ವಿಳಂಬ ಮಾಡದಂತೆ ಕೆ.ಇ.ಆರ್.ಸಿ ನಿಯಮ 12.01 ಮತ್ತು ಬೆವಿಕಂ ನಿಯಮಾವಳಿಗಳನ್ನು ಪಾಲಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

ವಿದ್ಯುತ್ ಸಂಪರ್ಕವನ್ನು ಕಲ್ಪಿಸುವಾಗ ಹಾಗೂ ಗಣೇಶ ವಿಸರ್ಜನೆ ಉತ್ಸವದ ಸಂಧರ್ಭದಲ್ಲಿ ಈ ಕೆಳಕಂಡ ಮುಂಜಾಗ್ರತ ಕ್ರಮಗಳನ್ನು ಸುರಕ್ಷತಾ ದೃಷ್ಟಿಯಿಂದ ತಪ್ಪದೇ ಪಾಲಿಸಲು ತಿಳಿಸಲಾಗಿರುತ್ತದೆ.

1. ನಿರಾಕ್ಷೇಪಣಾ ಪತ್ರಕ್ಕೆ ಸ್ಥಳೀಯ ಪ್ರಾಧಿಕಾರದಿಂದ ಪತ್ರ ನೀಡಿದಾಗ ಕೂಡಲೇ ಸ್ವತಃ ಸಂಬಂಧಪಟ್ಟ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್/ಸಹಾಯಕ ಇಂಜಿನಿಯರ್‌ಗಳು ಗಣೇಶ ವಿಗ್ರಹವನ್ನು ಪ್ರತಿಷ್ಠಾಪಿಸಲು ನಿರ್ಮಾಣ ಮಾಡಿರುವ ಪೆಂಡಾಲ್ ಅಥವಾ ಸಮಾರಂಭ ನಡೆಯುವ ಜಾಗವನ್ನು ಪರಿಶೀಲಿಸಿ EHT/HT/LT crossing ಮತ್ತು ಇತರೆ ವಿದ್ಯುತ್ ಪರಿಕರಗಳ ಸುರಕ್ಷತ ಅಂತರದ ಬಗ್ಗೆ ಪರಿಶೀಲಿಸಿ ಸುರಕ್ಷತೆಯಿಂದ ಕೂಡಿದೆಯೇ ಎಂಬುದನ್ನು ಖಾತ್ರಿ ಪಡಿಸಿಕೊಂಡು, ಸುರಕ್ಷಿತವಾಗಿದ್ದಲ್ಲಿ ಮಾತ್ರ ನಿರಾಕ್ಷೇಪಣಾ ಪತ್ರ ನೀಡುವುದು.
2. ವಿದ್ಯುತ್ ಸಂಪರ್ಕಕ್ಕೆ ಅರ್ಜಿ ಸಲ್ಲಿಸಿದಾಗ ಬೇರೆ ಎಲ್ಲಾ ಸಂಬಂಧಪಟ್ಟ (ಬಿಬಿಎಂಪಿ/ಬಿಡಿಎ/ಗ್ರಾಮ ಪಂಚಾಯಿತಿ/ಆರಕ್ಷಕ ಠಾಣೆ ಹಾಗೂ ಇನ್ನಿತರ) ಪ್ರಾಧಿಕಾರಗಳಿಂದ ನಿರಾಕ್ಷೇಪಣಾ ಪತ್ರ ಬಂದಿದೆಯೇ ಎಂಬುದನ್ನು ಪರಿಶೀಲಿಸಿದ ನಂತರವಷ್ಟೇ, ಅರ್ಜಿಯನ್ನು ನೊಂದಾಯಿಸಿಕೊಳ್ಳುವುದು, ಇಲ್ಲದಿದ್ದಲ್ಲಿ ಹಿಂಬರಹವನ್ನು ಕೂಡಲೇ ನೀಡುವುದು.
3. ಅರ್ಜಿಯ ಜೊತೆ ಎಲ್ಲಾ ಪ್ರಾಧಿಕಾರಗಳ ನಿರಾಕ್ಷೇಪಣಾ ಪತ್ರದ ಜೊತೆಗೆ ವೈರಿಂಗ್ ಸುರಕ್ಷತೆ, ಎಂ.ಸಿ.ಬಿ ಮತ್ತು ELCB ಅಳವಡಿಕೆಯ ಬಗ್ಗೆ ನೊಂದಾಯಿತ ವಿದ್ಯುತ್ ಗುತ್ತಿಗೆದಾರರಿಂದ ವೈರಿಂಗ್ ಸಮಾಪನ ವರದಿಯನ್ನು ಪಡೆದು ಸ್ಥಳ ಪರಿಶೀಲಿಸಿದ ನಂತರ ವಿದ್ಯುತ್ ಸಂಪರ್ಕ ಕಲ್ಪಿಸುವುದು.
4. ಗಣೇಶೋತ್ಸವದ ವಿಸರ್ಜಜನೆಯ ವೇಳೆ ನಡೆಯುವ ಮೆರವಣಿಗೆಯಲ್ಲಿ ರಸ್ತೆಯ ಅಕ್ಕಪಕ್ಕದಲ್ಲಿ ಹಾಗೂ ರಸ್ತೆಗೆ ಅಡ್ಡಲಾಗಿ ಹಾದುಹೋಗಿರುವ ವಿದ್ಯುತ್ ಮಾರ್ಗವನ್ನು ಸೂಕ್ಷ್ಮವಾಗಿ ಪರಿಶೀಲನೆ ಮಾಡಿ, ಯಾವುದೇ ವಿದ್ಯುತ್ ಅಪಘಾತಕ್ಕೆ ಎಡೆ ಮಾಡದಂತೆ ಎಚ್ಚರವಹಿಸುವುದು. ಮುಂಜಾಗ್ರತ ಕ್ರಮವಾಗಿ ಸಡಿಲವಾಗಿರುವ ಮತ್ತು ಜೋತು ಬಿದ್ದಿರುವ ವಿದ್ಯುತ್ ಮಾರ್ಗವನ್ನು ಸರಿಪಡಿಸುವುದು ಮತ್ತು ವಿದ್ಯುತ್ ಮಾರ್ಗದ ಕಟ್ ಪಾಯಿಂಟ್‌ಗಳಲ್ಲಿರುವ ಸಡಿಲಗೊಂಡಿರುವ ಜಾಯಿಂಟ್‌ಗಳನ್ನು ಸರಿಪಡಿಸುವುದು.

Scanned with OKEN Scanner

Scanned with OKEN Scanner

5. ಗಣೇಶೋತ್ಸವ ಮೆರವಣಿಗೆ ಹಾಗೂ ವಿಸರ್ಜನೆಯ ನಡೆಯುವ ವ್ಯಾಪ್ತಿಗೆ ಒಳಪಡುವ ವಿದ್ಯುತ್ ಸಂಪರ್ಕ ಕಲ್ಪಿಸುವ 11ಕೆ.ವಿ ವಿದ್ಯುತ್ ಮಾರ್ಗದಲ್ಲಿ ಅಳವಡಿಸಿರುವ ಹೆಚ್.ಜಿ.ಫ್ಯೂಸ್‌ಗಳನ್ನು, ಜಿ.ಓ.ಎಸ್‌ಗಳನ್ನು, ಪರಿವರ್ತಕ ಕೇಂದ್ರಗಳ ಎಲ್.ಟಿ ವೈರಿಂಗ್ ಕಿಟ್ ಹಾಗೂ ಫ್ಯೂಸ್‌ಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡುವುದು ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಯಾವುದೇ ರೀತಿಯ ತೊಂದರೆಯಾಗದಂತೆ ನಿರಂತರ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವುದು.

6. ಗಣೇಶೋತ್ಸವದ ವಿಸರ್ಜನೆಯ ವೇಳೆ ನಡೆಯುವ ಮೆರವಣಿಗೆಯಲ್ಲಿ ರಸ್ತೆಯ ಅಕ್ಕಪಕ್ಕದಲ್ಲಿ ಅಳವಡಿಸಿರುವ ವಿದ್ಯುತ್ ಪರಿವರ್ತಕ ಕೇಂದ್ರಗಳು, ಆರ್.ಎಂ.ಯು ಕೇಂದ್ರಗಳು ಹಾಗೂ ಎಲ್.ಟಿ ಡಿಸ್ಟ್ರಿಬ್ಯೂಷನ್ ಬಾಕ್ಸ್‌ಗಳು ಇನ್ನಿತರ ವಿದ್ಯುತ್ ಪರಿಕರಗಳು ಇರುವ ಸ್ಥಳದಲ್ಲಿ ಸಾರ್ವಜನಿಕರಿಗೆ ಮನವರಿಕೆಯಾಗುವಂತೆ "ಡೇಂಜರ್ ಜೋನ್" ಎಂದು ನಮೂದಿಸುವುದು.

7. ತಾತ್ಕಾಲಿಕ ವಿದ್ಯುತ್ ಸಂಪರ್ಕ ಕಲ್ಪಿಸುವಾಗ Pre-paid meter ಲಭ್ಯವಿಲ್ಲದ ಸಂದರ್ಭದಲ್ಲಿ ಮತ್ತು 15ದಿನಕ್ಕಿಂತ ಕಡಿಮೆ ಅವಧಿಯ ತಾತ್ಕಾಲಿಕ ವಿದ್ಯುತ್ ಸಂಪರ್ಕವನ್ನು ಕೋರಿದ್ದಲ್ಲಿ ಸಾಮಾನ್ಯ ಮಾಪಕಗಳನ್ನು ಅಳವಡಿಸಿ, ತಂತ್ರಾಂಶದಲ್ಲಿ ಕಡ್ಡಾಯವಾಗಿ ವಿದ್ಯುತ್ ಸಂಪರ್ಕದ ಎಲ್ಲಾ ಹಂತಗಳನ್ನು ಪೂರ್ಣಗೊಳಿಸಿ, ವಿದ್ಯುತ್ ಮಾಪನವನ್ನು ತಂತ್ರಾಂಶದಲ್ಲಿ ಬೇಡಿಕೆಯಾಗುವಂತೆ (Demand) ಕ್ರಮ ಕೈಗೊಳ್ಳುವುದು.

8. ತಾತ್ಕಾಲಿಕ ಸ್ಥಾವರದ ಅವಧಿ ಮುಗಿದ ನಂತರ ತಂತ್ರಾಂಶದಲ್ಲಿ ಅಂತಿಮ ರೀಡಿಂಗ್ ನಮೂದಿಸಿ, ಮಾಪಕ ಕಳಚುವ ಮತ್ತು ಇತರೆ ಹಂತಗಳನ್ನು ಪೂರ್ಣಗೊಳಿಸುವುದು.

ಮೇಲ್ಕಂಡ ಎಲ್ಲಾ ಸುರಕ್ಷತಾ ಕ್ರಮಗಳನ್ನು ತೆಗೆದುಕೊಂಡು ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ವಿಳಂಬವಾಗದಂತೆ ಮತ್ತು ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕ್ರಮಕೈಗೊಳ್ಳಲು ಎಲ್ಲಾ ಬೆ.ವಿ.ಕಂನ ಅಧಿಕಾರಿಗಳಿಗೆ ಈ ಮೂಲಕ ಸೂಚಿಸಲಾಗಿದೆ. ಮುಂದುವರೆದು, ಯಾವುದಾದರೂ ವಿದ್ಯುತ್ ಅಫಘಾತಗಳು ಕಂಡುಬಂದಲ್ಲಿ, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ತೆಗೆದುಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ತಮ್ಮ ವಿಶ್ವಾಸಿ,

ಮುಖ್ಯ ಪ್ರಧಾನ ವ್ಯವಸ್ಥಾಪಕರು(ವಿ),
ಆಪರೇಶನ್ಸ್. ಬೆ.ವಿ.ಕಂ

Scanned with OKEN Scanner
Scanned with OKEN Scanner